# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಲಾಸ

ಕನ್ನಡ ದಿನಪತ್ರಿಕೆ

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 275 | Pages. 2 | Date: 20-09-2025, SATURDAY RNI NO: KARKAN/2024/89601 Kannada Daily

ಸಂಪುಟ : 01 – ಸಂಚಿಕೆ : 275 – ಪುಟಗಳು : 2 20-09-2025 ಶನಿವಾರ Ph: 8762954248 ದರ : ₹1


# ತೆಂಗು ಕಾಯಕಲ್ಪ ರಥಯಾತ್ರೆಗೆ ಸಂಸದರ ಚಾಲನೆ

## ಜಿಲ್ಲಾದ್ಯಂತ ಸಂಚರಿಸಲಿರುವ ಯಾತ್ರೆ । ಸದುಪಯೋಗಕ್ಕೆ ಸಲಹೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ತೋಟಗಾರಿಕೆ ಇಲಾಖೆ ವತಿಯಿಂದ ಹಮ್ಮಿಕೊಂಡಿರುವ ತೆಂಗು ಬೆಳೆಯಲ್ಲಿ ರೋಗ, ಕೀಟಬಾಧೆ ನಿಯಂತ್ರಣ ಹಾಗೂ ಉತ್ತಮ ಬೇಸಾಯ ಕ್ರಮ ಕೈಗೊಳ್ಳುವ ಬಗ್ಗೆ ಬೆಳೆಗಾರರಿಗೆ ಮಾಹಿತಿ ನೀಡುವ ಉದ್ದೇಶದಿಂದ ಹಮ್ಮಿಕೊಂಡಿರುವ ತೆಂಗು ಕಾಯಕಲ್ಪ ರಥಯಾತ್ರೆಗೆ ನಗರದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಸಂಸದ ಶ್ರೇಯಸ್ ಪಟೇಲ್ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ತೆಂಗು ಬೆಳೆಗೆ ತಗುಲುವ ರೋಗಬಾಧೆಯನ್ನು ಪ್ರಾಥಮಿಕ ಹಂತದಲ್ಲಿಯೇ ನಿಯಂತ್ರಿಸಿದರೆ ರೋಗ ಹರಡುವಿಕೆ ತಡೆಗಟ್ಟಬಹುದು. ಈ ನಿಟ್ಟಿನಲ್ಲಿ ಇಲಾಖೆಯ ಸಲಹೆ ಪಡೆದು ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ತೆಂಗು ಬೆಳೆಗೆ ತಗುಲುತ್ತಿರುವ ರೋಗದ ಕುರಿತಾಗಿ ಜಾಗೃತಿ ಮೂಡಿಸಲು ರಾಜ್ಯ ಸರ್ಕಾರ ರಥಯಾತ್ರೆ ಹಮ್ಮಿಕೊಂಡಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜರೂರಾಗಿ ತೆಂಗು ಬೆಳೆಗೆ ಹರಡುತ್ತಿರುವ ರೋಗದ ಕುರಿತಾಗಿ ಕ್ರಮ ಕೈಗೊಳ್ಳುತ್ತಿದೆ. ಕೇಂದ್ರ ರೈಲ್ವೆ ರಾಜ್ಯ ಖಾತೆ ಸಚಿವ ವಿ. ಸೋಮಣ್ಣ ಅವರ ಅಧ್ಯಕ್ಷತೆಯಲ್ಲಿ ನಡೆದ ತೆಂಗು ಬೆಳೆ ಸಂರಕ್ಷಣೆ ಸಭೆಯಲ್ಲಿ ಪ್ರಚಾರ ರಥಕ್ಕೆ ವ್ಯವಸ್ಥೆ ಮಾಡುವಂತೆ ಅಭಿಪ್ರಾಯ ಕೇಳಿಬಂದಿತ್ತು ಎಂದರು.




"ತೆಂಗು ಬೆಳೆಯುವ ಜಿಲ್ಲೆಯ ಸಂಸದರ ಮನವಿ ಮೇರೆಗೆ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅವರು ಕಾಸರಗೋಡಿನ ತೆಂಗು ಸಂರಕ್ಷಣಾ ಘಟಕಕ್ಕೆ ಶೀಘ್ರ ಭೇಟಿ ನೀಡಲಿದ್ದಾರೆ. ಜಿಲ್ಲೆಯ ರೈತರ ಹಿತದೃಷ್ಟಿ ಕಾಪಾಡಲು ಶಕ್ತಿಮೀರಿ ಶ್ರಮಿಸುತ್ತೇನೆ.

– ಶ್ರೇಯಸ್ ಪಟೇಲ್, ಸಂಸದ

### ಸಂಸತ್ ಅಧಿವೇಶನದಲ್ಲೂ ಪ್ರಸ್ತಾಪಿಸುವೆ

ಸಂಸತ್ ಅಧಿವೇಶನದಲ್ಲೂ ಸಮಸ್ಯೆ ಕುರಿತಾಗಿ ಗಮನ ಸೆಳೆಯುತ್ತೇನೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ರೋಗವನ್ನು ಹತೋಟಿಗೆ ತರಲು ಕ್ರಮ ಕೈಗೊಳ್ಳುತ್ತವೆ. ರೈತರು ಕಾರ್ಯಕ್ರಮದ ಪ್ರಯೋಜನ ಪಡೆಯಬೇಕು. ಹೆಚ್ಚಿನ ಮಾಹಿತಿಗಾಗಿ ತೋಟಗಾರಿಕೆ ಇಲಾಖೆ ತಾಲ್ಲೂಕು ಹಿರಿಯ ಸಹಾಯಕ ನಿರ್ದೇಶಕರ ಕಚೇರಿ ಭೇಟಿ ನೀಡಬಹುದೆಂದರು.

ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ ಮಾತನಾಡಿ, ತೆಂಗು ಬೆಳೆಯಲ್ಲಿ ಹಾಸನ ಜಿಲ್ಲೆ ರಾಜ್ಯದಲ್ಲಿ ಎರಡನೇ ಸ್ಥಾನದಲ್ಲಿದೆ. 1.18 ಲಕ್ಷ ಹೆಕ್ಟರ್ ಪ್ರದೇಶದಲ್ಲಿ ತೆಂಗು ಬೆಳೆ ಕೈಗೊಳ್ಳಲಾಗಿದೆ.

ಪ್ರಸ್ತುತ ಹಲವಾರು ರೋಗಗಳು ತೆಂಗು ಬೆಳೆಯನ್ನು ಕಾಡುತ್ತಿವೆ ಮತ್ತು ಇಳುವರಿ ಕಡಿಮೆಯಾಗುತ್ತಿದೆ. ಹಾಗಾಗಿ ಅದನ್ನುಯಾವ ರೀತಿ ತಡೆಗಟ್ಟಬೇಕು ಎಂಬುದರ ಕುರಿತಾಗಿ ಈ ರಥದ ಮೂಲಕ ಮನವರಿಕೆ ಮಾಡಿಕೊಡಲಾಗುತ್ತಿದೆ ಎಂದರು.

ಜಿಲ್ಲೆಯಾದ್ಯಂತ ಎಲ್ಲಾ ತಾಲ್ಲೂಕುಗಳಲ್ಲಿ ತೆಂಗು ಕಾಯಕಲ್ಪ ರಥ ಪ್ರಚಾರ ಮಾಡಲಿದೆ. ಜಿಲ್ಲೆಯ ಎಲ್ಲಾ ರೈತರು ಸದುಪಯೋಗ ಪಡೆದು ಔಷಧಿ ಮಾಹಿತಿ ಮತ್ತುಯಾವ ರೀತಿ ಅದನ್ನು ಬಳಕೆ ಮಾಡಬೇಕೆಂಬುದರ ಕುರಿತಾಗಿ ತಿಳಿವಳಿಕೆ ಪಡೆಯಬೇಕೆಂದು ಸಲಹೆ ನೀಡಿದರು.

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಮಂಜುನಾಥ್, ಸಹಾಯಕ ತೋಟಗಾರಿಕಾ ನಿರ್ದೇಶಕ ತೇಜ್ ಕುಮಾರ್ ಮತ್ತಿತರರಿದ್ದರು.

## ಪರೋಪ ಜೀವಿ ಉತ್ಪಾದನಾ ಕೇಂದ್ರಕ್ಕೆ ಪ್ರಸ್ತಾವನೆ

ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಯೋಗೇಶ್ ಮಾತನಾಡಿ, ಜಿಲ್ಲೆಯಲ್ಲಿ ಕಳೆದ ಕೆಲವು ವರ್ಷಗಳಿಂದ ತೆಂಗಿನ ಬೆಳೆಯಲ್ಲಿ ಬೇರೆ ಬೇರೆ ಕಾರಣದಿಂದ ರೋಗ ಮತ್ತು ಕೀಟಗಳ ಬಾಧೆ ಹೆಚ್ಚಾಗಿದೆ. ಅದರಿಂದ ಇಳುವರಿ ಕುಂಠಿತವಾಗಿದೆ ಎಂದರು.

ಕಾಂಡ ಸೋರುವ ರೋಗ ಮತ್ತುಅಣಬೆ ರೋಗ ಹಾಗು ಕಪ್ಪುತಲೆ ಹುಳು, ರುಗೋಸ್ ಬಿಳಿನೊಣ ಕೀಟಗಳು ಹೆಚ್ಚಾಗಿ ಕಂಡು ಬಂದಿದೆ. ಅದಕ್ಕೆ ಔಷದಿಗಳನ್ನು ಇಲಾಖೆಯಿಂದ ವಿತರಿಸಲಾಗುತ್ತಿದೆ. ರೈತರು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ ಸಂಪರ್ಕಿಸಿ ಪಡೆಯಬಹುದಾಗಿದೆ ಎಂದರು.

ತೆಂಗು ಬೆಳೆಯನ್ನು ಹೆಚ್ಚಾಗಿ ಬಾಧಿಸುವ ಕಪ್ಪುತಲೆ ಹುಳು ರೋಗ ನಿಯಂತ್ರಣಕ್ಕೆ ಪರೋಪ ಜೀವಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಉತ್ಪಾದಿಸಿ ಜಿಲ್ಲೆಯ ರೈತರಿಗೆ ಉಚಿತವಾಗಿ ವಿತರಿಸುವ ಉದ್ದೇಶದಿಂದ ಅರಸೀಕೆರೆ ಮತ್ತು ಹೊಳೆನರಸೀಪುರ ಪ್ರಯೋಗಾಲಯಗಳನ್ನು ಉನ್ನತೀಕರಣಕ್ಕೆ 3 ಕೋಟಿ ರೂ. ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ತೆಂಗಿನ ಬೆಳೆಯಲ್ಲಿ ಸಮಗ್ರ ರೋಗ ಕೀಟ ನಿಯಂತ್ರಣ ಹಾಗೂ ಪೋಷಕಾಂಶ ನಿರ್ವಹಣಾ ಪದ್ಧತಿ ಅಳವಡಿಸಿಕೊಳ್ಳಲು ಅವಶ್ಯವಿರುವ ಪರಿಕರಗಳನ್ನು ರೈತರಿಗೆ ಒದಗಿಸಲು 197 ಕೋಟಿ ರೂ. ಪ್ರಸ್ತಾವನೆಯನ್ನು ಹಾಗು ತೆಂಗು ಬೆಳೆಗೆ ಸಮರ್ಪಕವಾಗಿ ನೀರನ್ನು ಪೂರೈಸಲು ಅನುಗುಣವಾಗುವಂತೆ sub surface irrigation system ಅಳವಡಿಸಲು ಸಹಾಯಧನ ವಿತರಣೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆಎಂದು ಮಾಹಿತಿ ನೀಡಿದರು.

ಇದೇ ವೇಳೆ ರೈತರಿಗೆ ಮಾಹಿತಿ ನೀಡುವ ಕರಪತ್ರ ಹಾಗೂ ಪೋಸ್ಟರ್ ಬಿಡುಗಡೆ ಮಾಡಲಾಯಿತು.

# ಕರ್ತವ್ಯ ಲೋಪ: ಬೇಲೂರು ಬಿಇಒ ಸಸ್ಪೆಂಡ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಕರ್ತವ್ಯ ಲೋಪ ಹಾಗೂ ಕ್ಷೇತ್ರ ಶಿಕ್ಷಕರಿಗೆ ಅವಮಾನ ಮಾಡಿದ ಆರೋಪದಡಿ ಕ್ಷೇತ್ರ ಶಿಕ್ಷಣಾಧಿಕಾರಿ ರಾಜೇಗೌಡ ಅವರನ್ನು ಅಮಾನತು ಮಾಡಲಾಗಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ವರದಿ ಆಧರಿಸಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅಧೀನ ಕಾರ್ಯದರ್ಶಿ ಮಲ್ಲಿಕಾರ್ಜುನ ರಾಮಚಂದ್ರಪ್ಪ ಅವರು ಆದೇಶ ಹೊರಡಿಸಿದ್ದಾರೆ.

ತಾಲ್ಲೂಕು ಮಟ್ಟದ ಕ್ರೀಡಾಕೂಟದ ಆಹ್ವಾನ ಪತ್ರಿಕೆಯಲ್ಲಿ ಶಾಸಕರ ಹೆಸರು ಮುದ್ರಿಸದೆ ಶಿಷ್ಟಾಚಾರ ಉಲ್ಲಂಘನೆ ಹಾಗೂ ಇತರ ಆರೋಪಗಳಿಗೆ ರಾಜೇಗೌಡ ಗುರಿಯಾಗಿದ್ದರು. ಸೆ. 10ರಂದು ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ತಾಲ್ಲೂಕು ಮಟ್ಟದ ಕ್ರೀಡಾಕೂಟಕ್ಕೆ ಆಗಮಿಸಿದ್ದ ಶಾಸಕ ಹೆಚ್.ಕೆ. ಸುರೇಶ್ ಪಕ್ಕದಲ್ಲೇ ರಾಜೇಗೌಡ ಆಸೀನರಾಗಿದ್ದರು. ಆಹ್ವಾನ ಪತ್ರಿಕೆಯಲ್ಲಿ ತಮ್ಮ ಹೆಸರು ಹಾಕಿಲ್ಲವೆಂದು ಶಾಸಕ ಸುರೇಶ್ ತರಾಟೆಗೆ ತೆಗೆದುಕೊಂಡಿದ್ದರು. ಇಂತಹ ಭ್ರಷ್ಟ ಅಧಿಕಾರಿ ನನ್ನ ಪಕ್ಕ ಕೂರುವುದು ಬೇಡ, ರಾತ್ರಿಯಾದರೆ ಪಾನಮತ್ತನಾಗಿ ಶಿಕ್ಷಕರಿಗೆಲ್ಲ ಕರೆ ಮಾಡಿ ಚಿತ್ರಹಿಂಸೆ ನೀಡುತ್ತಾನೆಂದು ಆಕ್ರೋಶ ವ್ಯಕ್ತಪಡಿಸಿದ್ದರು. ಶಾಸಕರ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ್ದ ರಾಜೇಗೌಡ, ಏರು ದನಿಯಲ್ಲಿ ತಿರುಗೇಟು ನೀಡಿದ್ದರು. ನಾನು ತಾಲ್ಲೂಕಿನ ಬಿಇಒ, ನಾನು ಇದೇ ಸೀಟಿನಲ್ಲಿ ಕುಳಿತುಕೊಳ್ಳುತ್ತೇನೆಂದು ವಾಗ್ವಾದ ನಡೆಸಿದ್ದರು. ವಿಚಾರವನ್ನು ಗಂಭೀರವಾಗಿ ಪರಿಗಣಿಸಿದ್ದ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರು ಮೇಲಧಿಕಾರಿಗೆ ವರದಿ ಒಪ್ಪಿಸಿದ್ದರು.



ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳಿಗೆ ಕರೆ ಮಾಡಿ ಶಿಕ್ಷಕರ ಸಂಘದ ನಿರ್ದೇಶಕರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಅತಿಥಿ, ನಿವೃತ್ತ ಶಿಕ್ಷಕರು ಹಾಗೂ ಹಳೆಯ ವಿದ್ಯಾರ್ಥಿಗಳ ಸಂಘದ ಪದಾಧಿಕಾರಿಗಳಿಗೆ ಹಣ ಕೊಡುವಂತೆ ಪೀಡಿಸುತ್ತಿದ್ದರೆಂದು ಆರೋಪಿಸಲಾಗಿದೆ.

# ಸಕಲೇಶಪುರದಲ್ಲಿ ಸಫಾಯಿ ಮಿತ್ರ ಸುರಕ್ಷಾ ಶಿಬಿರ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮೈಸೂರು ರೈಲ್ವೆ ವಿಭಾಗದಿಂದ ಸಕಲೇಶಪುರ ರೈಲ್ವೆ ಆರೋಗ್ಯ ಘಟಕದಲ್ಲಿ ಸಫಾಯಿ ಸಿಬ್ಬಂದಿಗಾಗಿ ಸಫಾಯಿ ಮಿತ್ರ ಸುರಕ್ಷಾ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಮೈಸೂರಿನ ಕೇಂದ್ರ ಕಚೇರಿಯಲ್ಲಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್ ಶಿಬಿರಕ್ಕೆ ಚಾಲನೆ ನೀಡಿದರು. ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಸಫಾಯಿ ಕಾರ್ಮಿಕರಿಗೆ ಲಭ್ಯವಿರುವ ವಿವಿಧ ಕಲ್ಯಾಣ ಯೋಜನೆ ಮತ್ತು ಸೌಲಭ್ಯಗಳ ಕುರಿತು ಮಾಹಿತಿ ನೀಡಲಾಯಿತು. ರಕ್ತದೊತ್ತಡ, ಮಧುಮೇಹ ಮತ್ತು ಅತಿಯಾದ ತೂಕದ ತಪಾಸಣೆ ನಡೆಸಲಾಯಿತು. ಆರೋಗ್ಯ ಸ್ಥಳದಲ್ಲಿ ಮುನ್ನೆಚ್ಚರಿಕೆ, ಪೌಷ್ಟಿಕಾಂಶ ಆಹಾರ ಸೇವನೆ ಕುರಿತು ಅರಿವು ಮೂಡಿಸಲಾಯಿತು. ಸಕಲೇಶಪುರದಲ್ಲಿ ಹಮ್ಮಿಕೊಂಡಿದ್ದ ಶಿಬಿರದ ನೇತೃತ್ವವನ್ನು ಹಿರಿಯ ಕಲ್ಯಾಣ ನಿರೀಕ್ಷಕ ಮೂರ್ತಿ ವಹಿಸಿದ್ದರು. ರೈಲ್ವೆ ಇಲಾಖೆಯ 7 ಸಿಬ್ಬಂದಿ ಕರ್ತವ್ಯ ನಿರ್ವಹಿಸಿದರು.

# ಸಂಘದ ಲಾಭಾಂಶ ಹಾಲು ಉತ್ಪಾದಕರಿಗೆ ಸಿಗಲಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಸಂಘದ ಲಾಭಾಂಶವನ್ನು ಹಾಲು ಉತ್ಪಾದಕ ಸದಸ್ಯರಿಗೆ ನೀಡುವ ಮೂಲಕ ಹೈನುಗಾರಿಕೆಯನ್ನು ಪ್ರೋತ್ಸಾಹಿಸಬೇಕು ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು. ತಾಲ್ಲೂಕಿನ ಹಿರೀಸಾವೆ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ವಾರ್ಷಿಕ ಸಭೆ ಮತ್ತು ಪಶು ಆಹಾರ ದಾಸ್ತಾನು ಕೊಠಡಿ ಉದ್ಘಾಟಿಸಿ ಮಾತನಾಡಿದರು. ಸಂಘದ ಬೆಳವಣಿಗೆಯಲ್ಲಿ ಸದಸ್ಯರ ಶ್ರಮ ಇರುತ್ತದೆ. ಗುಣಮಟ್ಟದ ಹಾಲನ್ನು ಸರಬರಾಜು ಮಾಡಿರುವುದರಿಂದ 202425ನೇ ಸಾಲಿನಲ್ಲಿ ಈ ಸಂಘವು ರೂ. 2,14,337 ರೂ. ನಿವ್ವಳ ಲಾಭ ಗಳಿಸಿದೆ. ಆ ಲಾಭ ಅವರಿಗೆ ಸೇರಬೇಕು. ಹೈನುಗಾರಿಕೆಗೆ ನೇರವಾದ ಮಾರುಕಟ್ಟೆ ಸಿಗುತ್ತಿರುವುದರಿಂದ ರೈತರಿಗೆ ಹೆಚ್ಚು ಅನುಕೂಲವಾಗಿದೆ ಎಂದು ತಿಳಿಸಿದರು.



ಹಾಸನ ಸಹಕಾರ ಹಾಲು ಒಕ್ಕೂಟದ ಸಹಾಯಕ ವ್ಯವಸ್ಥಾಪಕ ಎಂ. ದಯಾನಂದ್ ಮಾತನಾಡಿ, 90,970 ರೂ.ಗಳನ್ನು ಬೋನಸ್ ರೂಪದಲ್ಲಿ ವರ್ಷಪೂರ್ತಿ ಹಾಲು ಸರಬರಾಜು ಮಾಡಿದ ಪ್ರಮಾಣದಂತೆ ಸದಸ್ಯರಿಗೆ ಹಂಚಲಾಗುವುದು ಎಂದರು.

ಸಂಘದ ಅಧ್ಯಕ್ಷೆ ಪವಿತ್ರ ಮಂಜನಾಥ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮುಖಂಡರಾದ ರವಿಕುಮಾರ್, ಅನಂತರಾಜು, ಅಣತಿ ಯೋಗೇಶ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಜಯಮ್ಮ, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮಹೇಶ್, ಗ್ರಾಮ ಪಂಚಾಯಿತಿ ಸದಸ್ಯ ಸಂತೋಷ್, ಪಿಎಂಶ್ರೀ ಎಚ್‌ಪಿಜಿ ಶಾಲೆ ಮುಖ್ಯ ಶಿಕ್ಷಕಿ ಉಮಾ ದೇವರಾಜು, ಸಂಘದ ಕಾರ್ಯದರ್ಶಿ ಭಾರತಿ ಕುಮಾರ್ ಇತರರಿದ್ದರು.

# ಸಹಕಾರ ಕ್ಷೇತ್ರದಲ್ಲಿ ಪಾರದರ್ಶಕತೆ ಮುಖ್ಯ: ಸೋಮನಹಳ್ಳಿ ನಾಗರಾಜ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಸಹಕಾರ ಕ್ಷೇತ್ರ ಬೆಳೆಯಲು ಪ್ರಾಮಾಣಿಕತೆ ಮುಖ್ಯ ಎಂದು ಜಿಲ್ಲಾ ಸಹಕಾರ ಬ್ಯಾಂಕ್ ಅಧ್ಯಕ್ಷ ಸೋಮನಹಳ್ಳಿ ನಾಗರಾಜ್ ಹೇಳಿದರು.

ಶುಕ್ರವಾರ ತಾಲ್ಲೂಕಿನ ಜಮ್ಮನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿ, ಜಮ್ಮನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಸ್ವಂತ ಬಂಡವಾಳ ತೊಡಗಿಸಿಕೊಳ್ಳುವ ಮೂಲಕ ಉತ್ತಮ ಹೆಸರು ಗಳಿಸಿದೆ. ಸಹಕಾರ ಕ್ಷೇತ್ರದಲ್ಲಿ ಪಾರದರ್ಶಕತೆ ಹಾಗೂ ರೈತರ ಹಿತದೃಷ್ಟಿಯಿಂದ ಕಾರ್ಯನಿರ್ವಹಿಸುವುದು ಮುಖ್ಯ ಎಂದರು.

ರೈತರ ಬೇಡಿಕೆ ಹಿನ್ನೆಲೆಯಲ್ಲಿ ಎರಡು ವರ್ಷಗಳ ಹಿಂದೆ 2 ಕೋಟಿ ರೂಪಾಯಿ ಬೆಳೆಸಾಲ ಮತ್ತು 1 ಕೋಟಿ 35 ಲಕ್ಷ ರೂಪಾಯಿ ವ್ಯವಹಾರ ಸಾಲ ನೀಡಲಾಗಿದ್ದು, ರೈತರ ಜೀವನೋಪಾಯ ಸುಧಾರಣೆಗೆ ಸಹಕಾರಿ ಸಂಘ ಮಹತ್ತರ ಪಾತ್ರ ವಹಿಸುತ್ತಿದೆ ಎಂದು ತಿಳಿಸಿದರು.



ಕೇಂದ್ರ ಸರ್ಕಾರ ನಬಾರ್ಡ್ ಬ್ಯಾಂಕ್ ಮೂಲಕ ರೈತರಿಗೆ ಸಾಲ ಸೌಲಭ್ಯ ಒದಗಿಸುವುದರ ಜೊತೆಗೆ, ಬೀಜೋಪಚಾರ, ರಸಗೊಬ್ಬರ, ಕೃಷಿ ಸಾಧನ ವಿತರಣೆ ಮುಂತಾದ ಕೃಷಿ ಚಟುವಟಿಕೆಗಳಿಗೆ ಬಹು ಸೇವಾಕೇಂದ್ರಗಳ ಮೂಲಕ ನೆರವು ನೀಡುತ್ತಿದೆ ಎಂದರು.

### ಕೇಂದ್ರ ನಿರ್ಧಾರಕ್ಕೆ ಸ್ವಾಗತ

ಸಹಕಾರ ಕ್ಷೇತ್ರದಲ್ಲಿ ನಡೆಯುತ್ತಿರುವ ಅವ್ಯವಹಾರ ಹಾಗೂ ಭ್ರಷ್ಟಾಚಾರ ತಡೆಯುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಸಹಕಾರಿ ಕ್ಷೇತ್ರವನ್ನು ಸಂಪೂರ್ಣ ಗಣಕೀಕರಣಗೊಳಿಸಲು ಹೆಜ್ಜೆ ಇಟ್ಟಿರುವುದು ಒಳ್ಳೆಯ ಬೆಳವಣಿಗೆ ಎಂದು ಶ್ಲಾಘಿಸಿದರು.

ಜಿಲ್ಲಾ ಬ್ಯಾಂಕ್ ಪ್ರತಿವರ್ಷ ಸುಮಾರು 75 ಲಕ್ಷ ರೂ. ವೆಚ್ಚದಲ್ಲಿ ರೈತರಿಗೆ ಆರೋಗ್ಯ ವಿಮೆ ಮಾಡಿಸುತ್ತಿದೆ. ಇದುವರೆಗೆ ಎರಡು ಕೋಟಿ ರೂಪಾಯಿಗೂ ಮಿಕ್ಕಿದಷ್ಟು ರೈತರು ಇದರ ಪ್ರಯೋಜನ ಪಡೆದುಕೊಂಡಿದ್ದಾರೆ ಎಂದು ತಿಳಿಸಿದರು.

ಹೆಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಮಹಿಳಾ ಸ್ವಸಹಾಯ ಸಂಘಗಳಿಗೆ ಕಡಿಮೆ ಬಡ್ಡಿಯಲ್ಲಿ 5 ಲಕ್ಷರೂ. ಸಹಾಯವನ್ನು ಸಹಕಾರ ಸಂಘಗಳ ಮೂಲಕ ನೀಡಿದ ಯೋಜನೆಯನ್ನು ಅವರು ಸ್ಮರಿಸಿದರು.

ಹೆಚ್‌ಡಿಸಿಸಿ ಬ್ಯಾಂಕ್ ಹಾಗೂ ಸಹಕಾರ ಹಾಲು ಒಕ್ಕೂಟಗಳು ರೈತರು ಹಾಗೂ ಸಾರ್ವಜನಿಕರ ಹಿತದೃಷ್ಟಿಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದು, ಸಹಕಾರ ಚಳವಳಿ ಇನ್ನಷ್ಟು ಬಲವಾಗಿ ಬೆಳೆಯಲು ಎಲ್ಲರೂ ಸಹಕಾರ ನೀಡಬೇಕೆಂದು ಕರೆ ನೀಡಿದರು.

ಸಂಘದ ಅಧ್ಯಕ್ಷ ಬಿ.ಬಿ ಲೋಕೇಶ್ ಮಾತನಾಡಿ, ನಮ್ಮ ಸಂಘವು ಪ್ರಸಕ್ತ ವರ್ಷದಲ್ಲಿ 13,63.155 ಲಕ್ಷ ರೂ. ಲಾಭ ಗಳಿಸಿದೆ. ಕೃಷಿಯೇತರ ಸಾಲವಾಗಿ 5 ಕೋಟಿ ರೂ.ಗೂ ಹೆಚ್ಚು ಸಾಲ ನೀಡಿದ್ದೇವೆ. ರೈತರಿಗೆ 2024-25ನೇ ಸಾಲಿನಲ್ಲಿ 75 ಲಕ್ಷ ರೂ. ರಸಗೊಬ್ಬರ ಒದಗಿಸಲಾಗಿದೆ. ಸಂಘದಿಂದ 360 ಕುಟುಂಬಗಳಿಗೆ ಯಶಸ್ವಿನಿ ಆರೋಗ್ಯ ವಿಮೆ ನೊಂದಣಿ ಮಾಡಲಾಗಿದೆ ಎಂದು ತಿಳಿಸಿದರು.

ಸಂಘದ ನಿವೃತ್ತ ಸಿಬ್ಬಂದಿ ಚಿಕ್ಕಣ್ಣ ಅವರಿಗೆ ಅಭಿನಂದಿಸಲಾಯಿತು.

ಜಿಲ್ಲಾ ಸಹಕಾರ ಬ್ಯಾಂಕ್ ನಿರ್ದೇಶಕ ಕಬ್ಬಿನಹಳ್ಳಿ ಜಗದೀಶ್, ಜಮ್ಮನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷೆ ಉಷಾರಾಣಿ, ನಿರ್ದೇಶಕರಾದ ವೈ.ಡಿ. ಬಸವರಾಜು, ಬಿ.ಬಿ. ಮಂಜುನಾಥ್, ಎಂ.ಎಸ್. ಚಂದ್ರಶೇಖರ್, ಎಂ.ಆರ್. ಉದಯಶಂಕರ್, ನೇತ್ರಾವತಿ, ಉದೀಶ್, ರಾಜೇಶ್, ಕೃಷ್ಣಮೂರ್ತಿ, ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರೂಪ ಇತರರಿದ್ದರು.

# ಎಂಸಿಇ ಕಾಲೇಜು ವಿದ್ಯಾರ್ಥಿ ನೇಣಿಗೆ ಶರಣು



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಮಲೆನಾಡು ತಾಂತ್ರಿಕ ಕಾಲೇಜಿನ ವಿದ್ಯಾರ್ಥಿ ವಸತಿ ನಿಲಯದಲ್ಲಿ ನೇಣಿಗೆ ಶರಣಾಗಿದ್ದಾನೆ.

ತುರುವೇಕೆರೆ ನಗರದ ನಂಜುಂಡೇಗೌಡ ಹಾಗೂ ಮಮತಾ ದಂಪತಿ ಪುತ್ರ ದರ್ಶನ್ (24) ಮೃತರು. ಅಂತಿಮ ವರ್ಷದ ಸಿವಿಲ್ ಎಂಜಿನಿಯರಿಂಗ್‌ನಲ್ಲಿ ಓದುತ್ತಿದ್ದ. ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ವ್ಯಾಸಂಗಕ್ಕೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಸಿಂಗಲ್ ರೂಂ ಕೊಡಲಾಗುತ್ತದೆ. ಅದೇ ರೀತಿ ದರ್ಶನ್ ಕೂಡ ಹಾಸನಾಂಬ ವಿಭಾಗ ಕೊಠಡಿ ಸಂಖ್ಯೆ ಹೆಚ್.ಎ. 159ರಲ್ಲಿ ಇರುತ್ತಿದ್ದ. ಗುರುವಾರ ಎಂದಿನಂತೆ ತರಗತಿ ಮುಗಿಸಿಕೊಂಡು ಹಾಸ್ಟೆಲ್‌ಗೆ ತೆರಳಿದ್ದ. ಸಂಜೆ 6 ಗಂಟೆ ವೇಳೆಗೆ ಪ್ಲಾಸ್ಟಿಕ್ ವೈರ್ ಬಳಸಿ ಫ್ಯಾನ್‌ಗೆ ನೇಣು ಬಿಗಿದುಕೊಂಡಿದ್ದಾನೆ.

ದರ್ಶನ್ ಯಾವಾಗಲೂ ಒಬ್ಬನೇ ಇರುತ್ತಿದ್ದ. ಎಂಜಿನಿಯರ್ ಆಗಬೇಕೆಂಬ ತುಡಿತದಿಂದ ದಿನದ ಪೂರ್ತಿ ಸಮಯವನ್ನು ವಿದ್ಯಾಭ್ಯಾಸಕ್ಕಾಗಿ ಮೀಸಲಿಟ್ಟಿದ್ದ. ಆ ಒಂಟಿತನವೇ ಜೀವನದ ಮೇಲೆ ಜಿಗುಪ್ಸೆ ಬರುವಂತೆ ಮಾಡಿದೆ. ಹೀಗಾಗಿ ಆತ್ಮಹತ್ಯೆಯ ನಿರ್ಧಾರ ಕೈಗೊಂಡಿರಬಹುದು ಎನ್ನಲಾಗಿದೆ.

ದರ್ಶನ್ ಆತ್ಮಹತ್ಯೆ ಸುದ್ದಿ ಗೊತ್ತಾಗುತ್ತಿದ್ದಂತೆ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳು ಜಮಾಯಿಸಿದರು. ರಾತ್ರಿ 11 ಗಂಟೆ ವೇಳೆಗೆ ಜನಸಂದಣಿ ಹೆಚ್ಚಾಗಿದ್ದರಿಂದ ಹೆಚ್ಚುವರಿ ಪೊಲೀಸ್ ವರಿಷ್ಟಾಧಿಕಾರಿ ವೆಂಕಟೇಶ್ ನಾಯ್ಡು ಭೇಟಿ ನೀಡಿ ಮುಂಜಾಗ್ರತಾ ಕ್ರಮ ವಹಿಸಿದ್ದರು. ಹಿಮ್ಸ್‌ನ ಶವಾಗಾರದ ಎದುರು ಮೃತ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು. ವಿದ್ಯಾರ್ಥಿ ದರ್ಶನ್ ನಿಧನಕ್ಕೆ ಕಾಲೇಜು ಆಡಳಿತ ಮಂಡಳಿ ಸಂತಾಪ ಸೂಚಿಸಿದೆ. ಶುಕ್ರವಾರ ಹಮ್ಮಿಕೊಂಡಿದ್ದ 15ನೇ ಘಟಿಕೋತ್ಸವವನ್ನು ಸೆ. 20ರ ಶನಿವಾರಕ್ಕೆ ಮುಂದೂಡಲಾಗಿದೆ.

# ಜಾತಿ ಗಣತಿ: ಬೌದ್ಧ ಧರ್ಮ ಎಂದೇ ಬರೆಸಿ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ನಡೆಸಲಾಗುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಧರ್ಮದ ಕಾಲಂನಲ್ಲಿ ಬೌದ್ಧ ಎಂದು ಬರೆಸುವಂತೆ ದಲಿತ ಮುಖಂಡ ಹೆಚ್.ಕೆ. ಸಂದೇಶ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಸೆ. 22 ರಿಂದ ಅ.7ರ ವರೆಗೆ ಜಾತಿಗಣತಿ ನಡೆಯಲಿದೆ. ಪರಿಶಿಷ್ಟ ಜಾತಿಯಲ್ಲೇ ಮುಂದುವರಿಯಲು ಇಚ್ಛಿಸುವವರು ಕರ್ನಾಟಕ ಜಾತಿ ಗಣತಿ ಧರ್ಮದ ಕಾಲಂ 8ರ ಕ್ರಮ ಸಂಖ್ಯೆ 6ರಲ್ಲಿರುವ ಬೌದ್ಧ ಎನ್ನುವುದನ್ನು ಆಯ್ಕೆ ಮಾಡಿಕೊಳ್ಳಬೇಕು. ಕಾಲಂ 9ರಲ್ಲಿರುವ ಪರಿಶಿಷ್ಟ ಜಾತಿ ಅವಕಾಶ ಆಯ್ಕೆ ಮಾಡಿ, ನಂತರದ 10ರಲ್ಲಿರುವ ಉಪಜಾತಿ ಕಾಲಂನಲ್ಲಿ ತಮ್ಮ ಮೂಲಜಾತಿ (ಪರಿಶಿಷ್ಟ ಜಾತಿಯ 101 ಕಾಲಂನಲ್ಲಿ ಬರುವ ಮೂಲಜಾತಿ/ತಾವು ಪಡೆದಿರುವ ಜಾತಿ ಪ್ರಮಾಣ ಪತ್ರದಲ್ಲಿ ದಾಖಲಾಗಿರುವ ಜಾತಿ)ಯನ್ನು ನಮೂದು ಮಾಡಬೇಕು ಎಂದು ಸಲಹೆ ನೀಡಿದರು.

ಈ ಮೂಲಕ ಸಂವಿಧಾನದತ್ತ ಮೀಸಲಾತಿ ಹಕ್ಕಿನೊಡನೆ ತಮ್ಮ ಮೂಲ ಧರ್ಮವಾದ ಬೌದ್ಧ ಧರ್ಮಕ್ಕೆ ಮರಳುವ ಮೂಲಕ ಡಾ. ಬಿ.ಆರ್. ಅಂಬೇಡ್ಕರ್ ಅವರು ನಮ್ಮ ಮೇಲೆ ಇಟ್ಟಿರುವ ನಂಬಿಕೆ ಉಳಿಸಿಕೊಳ್ಳುವುದರ ಜೊತೆಗೆ ಅವರಿಗೆ ಗೌರವ ಸಲ್ಲಿಸುವಂತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ದಲಿತ ಮುಖಂಡರಾದ ಎಂ. ಸೋಮಶೇಖರ್, ಅಂಬುಗ ಮಲ್ಲೇಶ್, ರಾಜಶೇಖರ್, ಜಗದೀಶ್ ಚೌಡಳ್ಳಿ ಇತರರಿದ್ದರು.

# ಮಳಿಗೆ ಹರಾಜು ಸ್ಥಗಿತಕ್ಕೆ ವ್ಯಾಪಾರಿಗಳ ಮನವಿ

ಹಾಸನ: ನಗರದ ಕಟ್ಟಿನಕೆರೆ ಮಾರುಕಟ್ಟೆಯ ವಾಣಿಜ್ಯ ಮಳಿಗೆಗಳ ಇ-ಹರಾಜು ಪ್ರಕ್ರಿಯೆ ಸ್ಥಗಿತಗೊಳಿಸುವಂತೆ ವ್ಯಾಪಾರಿಗಳು ಶುಕ್ರವಾರ ಸಂಸದ ಶ್ರೇಯಸ್ ಪಟೇಲ್ ಅವರಿಗೆ ಮನವಿ ಸಲ್ಲಿಸಿದರು.

ಕಟ್ಟಿನಕೆರೆ ಮಳಿಗೆಗಳ ಮಾಲೀಕರ ಸಂಘದ ಉಪಾಧ್ಯಕ್ಷ ರಾಜೀವ್ ಮಾತನಾಡಿ, ಮಾರುಕಟ್ಟೆಯಲ್ಲಿ ಒಟ್ಟು 487 ಮಳಿಗೆಗಳಿವೆ. ಇ-ಹರಾಜು ಪ್ರಕ್ರಿಯೆ ಮಾಡುವುದರಿಂದ ಹಳೆಯ ಬಾಡಿಗೆದಾರರಿಗೆ ತೊಂದರೆಯಾಗುತ್ತದೆ. ಮಾರುಟ್ಟೆಯಲ್ಲಿನ ಬಾಡಿಗೆದಾರರು ಹೆಚ್ಚಾಗಿ ಅನಕ್ಷರಸ್ಥರು ಹಾಗೂ 60 ವರ್ಷ ಮೇಲ್ಪಟ್ಟ ಹಿರಿಯರು ಇರುವುದರಿಂದ ಅವರಿಗೆ ಇ-ಹರಾಜಿನ ಪ್ರಕ್ರಿಯೆ ಅರ್ಥವಾಗುವುದಿಲ್ಲ. 487 ಮಳಿಗೆಗಳನ್ನು ನಂಬಿ 2 ಸಾವಿರ ಕುಟುಂಬಗಳು ಜೀವನ ಮಾಡುತ್ತಿವೆ. ಈ ರೀತಿ ಹರಾಜು ಮಾಡುವುದರಿಂದ ಸಮಸ್ಯೆಯಾಗುತ್ತದೆ ಎಂದರು.



ಕೊರೊನಾ ಸಮಯದಲ್ಲಿ ಮೂರು ವರ್ಷ ವ್ಯಾಪಾಹಾರ ಸ್ಥಗಿತವಾಗಿದ್ದರಿಂದ ವ್ಯಾಪಾರಸ್ಥರು ಸಾಲದ ಹೊರೆ ಹೊತ್ತುಕೊಂಡು ಜೀವನ ನಿರ್ವಹಣೆ ಮಾಡಲು ಕಷ್ಟಪಡುವಂತಾಗಿದೆ. ತಕ್ಷಣ ಮಳಿಗೆ ಖಾಲಿ ಮಾಡಿಸಿದರೆ ನಿರುದ್ಯೋಗ, ಸಾಲ ಪಾವತಿಸಲು ಅಸಾಧ್ಯವಾಗುತ್ತದೆ. ಹಾಗಾಗಿ ಮಾನವೀಯ ನೆಲೆಯಲ್ಲಿ ಪ್ರಸ್ತುತ ಇರುವ ಅಂಗಡಿ ವ್ಯಾಪಾರಸ್ಥರಿಗೆ ಮಳಿಗೆ ಬಾಡಿಗೆ ಹೆಚ್ಚಿಸಿ ಅವರನ್ನೇ ಮುಂದುವರಿಸಲು ಅವಕಾಶ ನೀಡಬೇಕು. ಯಾವುದೇ ಇ-ಹರಾಜು ಹರಾಜು ಪ್ರಕ್ರಿಯೆ ನಡೆಸದಂತೆ ಕೋರಿದರು.

ಸಂಘದ ಗೌರವ ಅಧ್ಯಕ್ಷ ಜ್ವಾಲಣ್ಣ, ಅಧ್ಯಕ್ಷ ವೆಂಕಟೇಶ್, ಸತೀಶ, ಕಿರಣ, ಸ್ವಾಮಿಗೌಡ, ಬಂಗಾರಿ, ಷಡಾಕ್ಷರಿ, ವಿಶ್ವನಾಥ, ರಘು, ರಾಜಣ್ಣ ಇತರರು ಹಾಜರಿದ್ದರು.

# ಹಾಸನ ಡಿಸಿ ಕಚೇರಿ ನಿವೃತ್ತ ಸ್ಥಾನಿಕ ಸಹಾಯಕನಿಗೆ 2 ವರ್ಷ ಶಿಕ್ಷೆ

ಹಾಸನ: ಆದಾಯಕ್ಕಿಂತ ಅಧಿಕ ಆಸ್ತಿ ಗಳಿಸಿದ ಪ್ರಕರಣಕ್ಕೆ ಸಂಬಂಧಿಸಿ ಜಿಲ್ಲಾಧಿಕಾರಿ ಕಚೇರಿ ಹಿರಿಯ ಕೇಂದ್ರ ಸ್ಥಾನಿಕ ಸಹಾಯಕ ಕೆ.ಪಿ. ಹೊನಕೇರಿಗೆ 2 ವರ್ಷ ಕಾರಾಗೃಹ ಶಿಕ್ಷೆ ಹಾಗೂ 50 ಸಾವಿರ ರೂ. ದಂಡ ವಿಧಿಸಿ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯ ಶುಕ್ರವಾರ ಶಿಕ್ಷೆ ಪ್ರಕಟಿಸಿದೆ. 2008ರ ಮಾ. 26 ರಂದು ಲೋಕಾಯುಕ್ತ ಪೊಲೀಸರು ಕೆ.ಪಿ. ಹೊನಕೇರಿ ನಿವಾಸದ ಮನೆ ಮೇಲೆ ದಾಳಿ ನಡೆಸಿ ಆದಾಯಕ್ಕಿಂತ ಅಧಿಕ ಆಸ್ತಿ ಗಳಿಸಿದ ಆರೋಪದಡಿ ಕರ್ನಾಟಕ ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988ರ ಅಡಿ ದೂರು ದಾಖಲಿಸಿದ್ದರು. ತನಿಖಾಧಿಕಾರಿಯಾಗಿದ್ದ ಲೋಕಾಯುಕ್ತ ಪೊಲೀಸ್ ನಿರೀಕ್ಷಕ ರುದ್ರಮುನಿ ಅವರು ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟ ಸಲ್ಲಿಸಿದ್ದರು. ಲೋಕಾಯುಕ್ತ ಸಂಸ್ಥೆಯ ಪರವಾಗಿ ವಿಶೇಷ ಅಭಿಯೋಜಕ ಪರಶುರಾಮ್ ವಾದ ಮಂಡಿಸಿದ್ದರು. ಕಲಬುರಗಿ ಜಿಲ್ಲೆ ಅಫಜಲ್‌ಪುರ ಮೂಲದ ಕೆ.ಪಿ. ಹೊನಕೇರಿ ಸುಮಾರು 30 ವರ್ಷಗಳ ಕಾಲ ಹಾಸನದಲ್ಲೇ ಸೇವೆ ಸಲ್ಲಿಸಿದ್ದಾರೆ. 10 ವರ್ಷಗಳ ಹಿಂದೆ ಸೇವೆಯಿಂದ ನಿವೃತ್ತರಾಗಿದ್ದಾರೆ. ಪ್ರಕರಣ ದಾಖಲಾದ 17 ವರ್ಷಗಳ ಬಳಿಕ ತೀರ್ಪು ಹೊರಬಿದ್ದಿದೆ.

# ದಾರಿ ತಪ್ಪಿದ ಮಕ್ಕಳ ಸರಿ ದಾರಿಗೆ ತರುವ ಕೆಲಸವಾಗಲಿ

## ಪ್ರವಾದಿ ಮಹಮ್ಮದರ 1500ನೇ ಜಯಂತಿ | ಸಮುದಾಯಕ್ಕೆ ಸಲಹೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಸಕಲೇಶಪುರ: ಮಾದಕ ವಸ್ತುಗಳು, ಮದ್ಯಪಾನ, ವೇಶ್ಯಾವಾಟಿಕೆ ನಿಷೇಧಿಸುವುದರೊಂದಿಗೆ ಆರೋಗ್ಯಕರ ಜೀವನವನ್ನು ಪ್ರೋತ್ಸಾಹಿಸಿ, ಎಲ್ಲರಿಗೂ ಜ್ಞಾನವನ್ನು ಪಡೆಯುವಂತೆ ತಿಳಿಸಿದ ಶ್ರೇಷ್ಠ ಸಮಾಜ ಸುಧಾರಕ ಪ್ರವಾದಿ ಮುಹಮ್ಮದ್ ಆಗಿದ್ದಾರೆ. ಅವರ ತತ್ತ್ವಾದರ್ಶ ಪಾಲನೆ ಮೂಲಕ ಮಕ್ಕಳನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸಬೇಕಿದೆ ಎಂದು ಪುರಸಭೆ ಮಾಜಿ ಅಧ್ಯಕ್ಷ ಯಾದ್ಗಾರ್ ಇಬ್ರಾಹಿಂ ಹೇಳಿದರು.



ಪಟ್ಟಣದ ಶ್ರೀನಿವಾಸ ಕನ್ವೆನ್ಷನ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪ್ರವಾದಿ ಮಹಮ್ಮದ್ ಮುಸ್ತಫಾ ಅವರ 1500ನೇ ಜನ್ಮದಿನಾಚರಣೆಯಲ್ಲಿ ಮಾತನಾಡಿ, ಪ್ರವಾದಿ ಅವರ ಸಂದೇಶಗಳು ಮನುಷ್ಯರಲ್ಲಿ ಪ್ರೀತಿ, ತ್ಯಾಗ, ಶಾಂತಿ ಹಾಗೂ ಬಲಿದಾನದ ಮೌಲ್ಯಗಳನ್ನು ಬೆಳೆಸುವುದರೊಂದಿಗೆ ಸಮಾಜವನ್ನು ಸುಸಂಸ್ಕೃತಗೊಳಿಸುವುದೇ ಆಗಿದೆ ಎಂದರು.

ಸುಮಾರು 1500 ವರ್ಷಗಳ ಹಿಂದೆ ಅರಬ್‌ನಲ್ಲಿ ಹುಟ್ಟಿ, ಇಂದಿಗೂ ವಿಶ್ವದ 200 ಕೋಟಿ ಜನರ ಹೃದಯಗಳಲ್ಲಿ ಪ್ರವಾದಿ ಮಹಮ್ಮದ್ ಜೀವಂತವಾಗಿದ್ದಾರೆ. ಪ್ರವಾದಿ ಅವರ ಹೆಸರು ಇಲ್ಲದ ದೇಶ ಅಥವಾ ಪ್ರದೇಶ ಜಗತ್ತಿನಲ್ಲಿ ಇಲ್ಲ. ದಿನದ 24 ಗಂಟೆಗಳಲ್ಲೂ ಅಂತರಿಕ್ಷದಲ್ಲಿ ಅವರ ಹೆಸರು ಮೊಳಗುತ್ತಲೇ ಇರುತ್ತದೆ ಎಂದು ಹೇಳಿದರು.

ಇಂದಿನ ಕಾಲಘಟ್ಟದಲ್ಲಿ ಮಕ್ಕಳ ಭವಿಷ್ಯ ಗಂಭೀರ ಸವಾಲಿನಿಂದ ಕೂಡಿದೆ. ಗಾಂಜಾ, ಡ್ರಗ್ಸ್ ಸೇರಿದಂತೆ ಅನೇಕ ವ್ಯಸನಗಳು ಹಳ್ಳಿಯಿಂದ ನಗರವರೆಗೂ, ಕಾಲೇಜು ಕ್ಯಾಂಪಸ್‌ಗಳವರೆಗೂ ತಲುಪಿದೆ. ಮಕ್ಕಳು ಮಸೀದಿಯಲ್ಲಿದ್ದೇವೆ, ದರ್ಗಾದಲ್ಲಿದ್ದೇವೆ ಎಂದು ಮನೆಗೆ ಸುಳ್ಳು ಹೇಳಿ ಗದ್ದೆಗಳಲ್ಲಿ ನಿಂತುಕೊಂಡು ಗಾಂಜಾ ಸೇವಿಸುತ್ತಿರುವುದನ್ನು ಅನ್ಯಧರ್ಮಿಯರೇ ನನಗೆ ತೋರಿಸಿದರು. ನಾವು ಮಕ್ಕಳ ಬಗ್ಗೆ ಹೆಮ್ಮೆಪಡುತ್ತೇವೆ. ಆದರೆ ನಿಜವಾಗಿ ಅವರು ಎಲ್ಲಿ ತೊಡಗಿಕೊಂಡಿದ್ದಾರೆ ಎಂಬುದನ್ನು ಗಂಭೀರವಾಗಿ ಪರಿಶೀಲಿಸಬೇಕಾಗಿದೆ ಎಂದು ಪೋಷಕರಿಗೆ ಎಚ್ಚರಿಕೆ ನೀಡಿದರು.

ಜಾತಿ, ಧರ್ಮ, ವರ್ಗವನ್ನೇ ಬದಿಗಿಟ್ಟು ವ್ಯಸನದ ವಿರುದ್ಧ ಸಮಾಜ ಒಗ್ಗೂಡಬೇಕಿದೆ. ಪ್ರವಾದಿಯವರ ಸಂದೇಶವೇನು. ಪ್ರೀತಿ, ತ್ಯಾಗ, ಬಲಿದಾನ. ಹಸಿದವನಿಗೆ ಅನ್ನ ನೀಡದೆ ಸಾಯಲು ಕಾರಣವಾದವನು ನರಕಕ್ಕೆ ಹೋಗುತ್ತಾನೆ. ಆದರೆ ನಾಯಿಗೆ ನೀರು ಕೊಟ್ಟವನು ಸ್ವರ್ಗವನ್ನು ಪಡೆದಿದ್ದಾನೆ ಎಂಬುದೂ ಇಸ್ಲಾಂ ಹೇಳುತ್ತದೆ. ಇಸ್ಲಾಂ ಎಂದರೆ ಶಾಂತಿ, ಮುಸ್ಲಿಂ ಎಂದರೆ ಶಾಂತಿಯನ್ನು ಅನುಸರಿಸುವವನು ಎಂದು ಹೇಳಿದರು.

ಇಂದಿನ ರಾಜಕೀಯ ಪಕ್ಷಗಳು ತಮ್ಮ ಹಿತಾಸಕ್ತಿಗಾಗಿ ಮನುಷ್ಯರಲ್ಲಿ ದ್ವೇಷದ ಬೀಜ ಬಿತ್ತಲಾಗುತ್ತಿದೆ. ಒಂದು ಧಾರ್ಮಿಕ ಮೆರವಣಿಗೆಯಲ್ಲಿ ನಡೆದ ತಪ್ಪಿಗಾಗಿ ಇಡೀ ಸಮುದಾಯವನ್ನು ತಪ್ಪು ಮಾಡಲಾಗುತ್ತಿದೆ. ಇದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು.

ಪ್ರವಾದಿ ಮಹಮ್ಮದ್ ಅವರ ಉಪದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಮಕ್ಕಳನ್ನು ಮಾದರಿ ಮಕ್ಕಳನ್ನಾಗಿ ರೂಪಿಸಬಹುದು. ಅವರಿಗೆ ಉತ್ತಮ ಶಿಕ್ಷಣ, ಉತ್ತಮ ದಾರಿ ನೀಡಿದರೆ ಭಾರತವನ್ನು ಜಗತ್ತಿನಲ್ಲಿ ಎತ್ತಿಹಿಡಿಯಲು ಸಾಧ್ಯ ಎಂದು ಕರೆ ನೀಡಿದರು.

ಬದ್ರಿಯಾ ಜುಮಾ ಮಸೀದಿ ಆಡಳಿತ ಸಮಿತಿ ಅಧ್ಯಕ್ಷ ಯಾದ್ಗಾರ್ ಜಾಕೀರ್, ಉಪಾಧ್ಯಕ್ಷ ಆದಂ ಹಾಜಿ, ಕಾರ್ಯದರ್ಶಿ ಅಲೀಲ್ ಅಕ್ಬರ್, ಹಾಜಿ ಮಹಮ್ಮದ್, ಹಾಜಿ ಅಹಮದ್ ಬಾವಾ, ಖತೀಬ್ ಅಬ್ದುಲ್ ರಝಾಕ್ ಸಖಾಫಿ, ಉಸ್ತಾದ್‌ಗಳಾದ ರಫೀಕ್ ಸಅದಿ, ಸದಸ್ಯರಾದ ಹೈದರ್, ಅಬ್ದುಲ್ ಲತೀಫ್, ಮಜೀದ್, ಸಲೀಂ, ಮುಸ್ತಾಫಾ, ಸೌಕತ್ ಇತರರಿದ್ದರು.

## ಈಜು ಸ್ಪರ್ಧೆ: ರಾಷ್ಟ್ರ ಮಟ್ಟಕ್ಕೆ ಆಯ್ಕೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ಮಂಗಳೂರಿನಲ್ಲಿ ಜೈ ಹಿಂದ್ ಈಜು ಕ್ಲಬ್ ಆಯೋಜಿಸಿದ್ದ 2025-26ನೇ ಸಾಲಿನ ರಾಜ್ಯ ಮಟ್ಟದ ಬೈ-ಫಿನ್ ಈಜು ಸ್ಪರ್ಧೆಯಲ್ಲಿ ನಗರದ ಸುಜಲ ಕಾಲೇಜಿನ ವಿದ್ಯಾರ್ಥಿನಿ ದೇಶ್ನಾ ಪಿ. ಶೆಟ್ಟಿ ಮಹಿಳೆಯರ ವಿಭಾಗದಲ್ಲಿ ಚಾಂಪಿಯನ್ ಆಗಿ ರಾಷ್ಟ್ರ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.

50 ಹಾಗೂ 100 ಮೀಟರ್ ಫ್ರೀ ಸ್ಟೈಲ್ ನಲ್ಲಿ ಪ್ರಥಮ, 200ಮೀಟರ್ ಫ್ರೀಸ್ಟೈಲ್ ನಲ್ಲಿ ದ್ವಿತೀಯ ಮತ್ತು ಮಹಿಳೆಯರ ಮುಕ್ತ ಈಜು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಅದೇ ರೀತಿ ವಿಭಾಗ ಮಟ್ಟದ ದಸರಾ ಕ್ರೀಡಾಕೂಟದಲ್ಲಿ 100 ಹಾಗೂ 200 ಮೀಟರ್ ಬ್ರೆಸ್ಟ್‌ಸ್ಟ್ರೋಕ್ ಪ್ರಥಮ, 200 ಮೀಟರ್ ಫ್ರೀಸ್ಟೈಲ್ ಪ್ರಥಮ ಸ್ಥಾನವನ್ನು ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಇವರ ಸಾಧನೆಯನ್ನು ಶ್ಲಾಘಿಸಿ ಕಾಲೇಜಿನ ಅಧ್ಯಕ್ಷ ಡಾ. ಎಸ್. ಲೋಕೇಶ್, ಕಾರ್ಯದರ್ಶಿ ಶ್ವೇತ ಲೋಕೇಶ್, ಪ್ರಾಂಶುಪಾಲರು ಹಾಗೂ ಕಾಲೇಜಿನ ಎಲ್ಲಾ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

## ಇಂದು ಸುತ್ತೂರು ಶ್ರೀಗಳ 110ನೇ ಜಯಂತ್ಯುತ್ಸವ




ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಸಕಲೇಶಪುರ: ಸುತ್ತೂರು ಮಠದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಶತೋತ್ತರ ದಶಮಾನೋತ್ಸ 110ನೇ ಜಯಂತಿಯನ್ನು ಸೆ. 20ರ ಶನಿವಾರ ಪಟ್ಟಣದ ಗುರುವೇಗೌಡ ಕಲ್ಯಾಣ ಮಂಟಪದಲ್ಲಿ ಬೆಳಿಗ್ಗೆ 11 ಗಂಟೆಗೆ ಆಚರಿಸಲಾಗುತ್ತಿದೆಯೆಂದು ಮಲೆನಾಡು ವೀರಶೈವ ಸಮಾಜದ ಅಧ್ಯಕ್ಷ ಎಂ.ಎಸ್. ಧರ್ಮಪ್ಪ ಮೂಗಲಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶನಿವಾರ ಬೆಳಿಗ್ಗೆ 9 ಗಂಟೆಗೆ ಶ್ರೀ ಸಕಲೇಶ್ವರಸ್ವಾಮಿ ದೇವಾಲಯದಿಂದ ಕಲ್ಯಾಣ ಮಂಟಪದ ವರೆಗೆ ಸ್ವಾಮೀಜಿ ಅವರ ಭಾವಚಿತ್ರ ಮೆರವಣಿಗೆ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಜೆಎಸ್‌ಎಸ್ ಬಿ.ಇಡಿ ಕಾಲೇಜಿನ ಅಧೀಕ್ಷಕ ಮಂಜುನಾಥ್ ಮಾತನಾಡಿ, ಜಯಂತಿ ಅಂಗವಾಗಿ ಕ್ರಾಫರ್ಡ್ ಆಸ್ಪತ್ರೆಯ ರೋಗಿಗಳಿಗೆ ಹಾಗು ಕೌಡಳ್ಳಿಯ ಎನ್.ಕೆ. ಗಣಪಯ್ಯ ಕಿವುಡು ಮತ್ತು ಮೂಗ ಮಕ್ಕಳ ಶಾಲೆಗೆ ಹಣ್ಣುಹಂಪಲು ವಿತರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು. ಮೇಲಣಗವಿ ಶಿರಸಿಂಹಾಸನ ಸಂಸ್ಥಾನ ಮಠ ಶಿವಗಂಗಾ ಕ್ಷೇತ್ರದ ಡಾ. ಶ್ರೀ ಮಲೆಯ ಶಾಂತ ಮುನಿ ಸ್ವಾಮೀಜಿ ದಿವ್ಯಸಾನ್ನಿಧ್ಯ ವಹಿಸಲಿದ್ದು, ಶಾಸಕ ಸಿಮೆಂಟ್ ಮಂಜು ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಮಲೆನಾಡು ವೀರಶೈವ ಸಮಾಜದ ಅಧ್ಯಕ್ಷ ಎಂ.ಎಸ್. ಧರ್ಮಪ್ಪ ಮೂಗಲಿ ವಹಿಸಲಿದ್ದಾರೆ ಎಂದರು.

ಜೆಎಸ್‌ಎಸ್ ಬಿಇಡಿ ಕಾಲೇಜಿನ ಪ್ರಾಂಶುಪಾಲ ನಂಜುಂಡಪ್ಪ, ಕಾಲೇಜು ಅಧೀಕ್ಷಕ ಮಂಜುನಾಥ್ ಹಾಗೂ ಇತರರು ಉಪಸ್ಥಿತರಿದ್ದರು.

## ಪರಿಸರ ಸಂರಕ್ಷಣೆ ಎಲ್ಲರ ಆದ್ಯತೆಯಾಗಲಿ: ಚಂದ್ರಶೇಖರ್

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಚನ್ನರಾಯಪಟ್ಟಣ: ಪ್ರಕೃತಿ ನಮಗೆ ಸಿಕ್ಕಿರುವ ದೈವದತ್ತ ವರ, ಇದನ್ನು ನಾವುಗಳು ನಮ್ಮ ಸ್ವಾರ್ಥಕ್ಕೆ ಬಳಸಿಕೊಂಡು ಹಾಳು ಮಾಡುತ್ತಿದ್ದೇವೆ. ಪ್ರಕೃತಿ ಇದ್ದರಷ್ಟೆ ನಮ್ಮ ಉಳಿವು ಎಂಬುದನ್ನು ಮರೆತಿದ್ದೇವೆ. ಹಾಳು ಮಾಡಿರುವ ಪ್ರಕೃತಿಯನ್ನು ಮರುಸೃಷ್ಟಿ ಮಾಡುವ ಜವಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಚಂದ್ರಶೇಖರ್ ಹೇಳಿದರು.



ಪಟ್ಟಣದ ನವೋದಯ ವಿದ್ಯಾ ಸಂಸ್ಥೆ 2025-26ನೇ ಸಾಲಿನ ತಾಲ್ಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಸಮಗ್ರ ಪ್ರಶಸ್ತಿ ಪಡೆದ ಹಿನ್ನೆಲೆಯಲ್ಲಿ ಏರ್ಪಡಿಸಿದ್ದ ಅಭಿನಂದನಾ ಸಮಾರಂಭ ಮತ್ತು ಪೋಷಕರ ಸಮಾಲೋಚನಾ ಸಭೆಯಲ್ಲಿ ಮಾತನಾಡಿ, ಸೂರ್ಯನ ವಿಷಕಾರಕ ಕಿರಣಗಳು ಭೂಮಿಗೆ ನೇರವಾಗಿ ತಲುಪುವುದನ್ನು ತಡೆಯುವ ಪರಿಸರದಲ್ಲಿರುವ ಮುಖ್ಯವಾದ ಪದರ, ಅದನ್ನೀಗ ನಾವು ಐಷಾರಾಮಿ ಬದುಕಿನಿಂದಾಗಿ ಹಾಳು ಮಾಡುತ್ತಿದ್ದೇವೆ. ಇತ್ತೀಚೆಗೆ ಪರಿಸರದಲ್ಲಿನ ಗಾಳಿ, ನೀರಿನ ಕಲುಷಿತದಿಂದ ಮನುಷ್ಯನ ಬದುಕಿನ ಅವಧಿ ಕ್ಷೀಣಿಸುತ್ತಿದೆ. ನೂರಾರು ರೋಗಗಳಿಗೆ ತುತ್ತಾಗುತ್ತಿದ್ದಾನೆ. ಸ್ವಚ್ಛ ಗಾಳಿಗೆ ಅವಶ್ಯವಿರುವ ಮರಗಳನ್ನು ಬೆಳೆಸುವುದನ್ನು ಬಿಟ್ಟಿದ್ದೇವೆ, ಫ್ರಿಡ್ಜ್, ವಾಹನಗಳು ಕಾರ್ಖಾನೆಗಳಿಂದ ಹೊರಬರುವ ವಿಷಕಾರಿಕ ಅನಿಲ ಮರಗಳ ತಡೆಯುವಿಕೆ ಇಲ್ಲದ ಕಾರಣ ಆಕಾಶಕ್ಕೆ ಆವಿಯಾಗಿ ಓಝೋನ್ ಪದರ ತುತ್ತು ಬೀಳುತ್ತಿದೆ ಎಂದರು.

ಇದಕ್ಕೆ ಪರಿಹಾರವಾಗಿ ತ್ಯಾಜ್ಯವನ್ನು ಕಡಿಮೆ ಸೃಷ್ಟಿಸಬೇಕು, ತ್ಯಾಜ್ಯದ ಮರುಬಳಕೆಯಾಗಬೇಕು, ಇದಕ್ಕಾಗಿ ತಂತ್ರಜ್ಞಾನ ಮುಖ್ಯ, ವಿದ್ಯಾರ್ಥಿಗಳಾದ ನೀವು ಮೆಡಿಸಿನ್, ಇಂಜಿನಿಯರಿಂಗ್‌ನ ಆಚೆ ಬಂದು ಸಂಶೋಧನೆಗಳತ್ತ ಸಾಗಬೇಕು ಎಂದು ತಿಳಿಸಿದರು.

ನವೋದಯ ವಿದ್ಯಾ ಸಂಘದ ಅಧ್ಯಕ್ಷ ಸಿ.ಜೆ.ಮಂಜುನಾಥ್ ಮಾತನಾಡಿ, ಕ್ರೀಡೆಯಲ್ಲಿ ಕಾಲೇಜಿಗೆ ಸಮಗ್ರ ಪಶಸ್ತಿಯ ಕೀರ್ತಿ ತಂದ ವಿದ್ಯಾರ್ಥಿಗಳು, ಶಿಕ್ಷಣದಲ್ಲಿಯೂ ಉತ್ತಮ ಫಲಿತಾಂಶ ತರುವಲ್ಲಿ ಮುಂದಾಗಬೇಕು, ನೂತನ ಆಡಳಿತ ಮಂಡಳಿ, ಮತ್ತು ವಿದ್ಯಾರ್ಥಿಗಳ ಮೇಲೆ ಹೆಚ್ಚಿನ ಜವಬ್ದಾರಿ ಇದೆ, ಕ್ರೀಡೆ ಶಿಕ್ಷಣದ ಒಂದು ಭಾಗವಷ್ಟೆ, ಇದರೊಂದಿಗೆ ಫಲಿತಾಂಶ ಬಹಳ ಮುಖ್ಯ, ಪೋಷಕರು ಫಲಿತಾಂಶದ ಮೇಲೆ ನಿರೀಕ್ಷೆ ಹೊಂದಿದ್ದಾರೆ. ಅದನ್ನು ಹುಸಿಗೊಳಿಸದಂತೆ ಎಚ್ಚರವಹಿಸಬೇಕೆಂದರು.

ಇದೇ ವೇಳೆ ತಾಲ್ಲೂಕು ಮಟ್ಟದ ಪದವಿಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ವಿದ್ಯಾರ್ಥಿಗಳು ಅಥ್ಲೇಟಿಕ್ಸ್ ವಿಭಾಗ, ಗುಂಪು ಆಟಗಳಲ್ಲಿ ಭಾಗವಹಿಸಿ ಗೆದ್ದು ಸಮಗ್ರ ಪ್ರಶಸ್ತಿ ತಂದಿದ್ದು, ಸಾಧನೆ ಮಾಡಿದ ಮಕ್ಕಳನ್ನು ಕಾಲೇಜು ಆಡಳಿತ ಮಂಡಳಿ ಅಭಿನಂಧಿಸಿತ್ತು. ಬಾಲಕರ ವೈಯಕ್ತೀಕ ಚಾಂಪಿಯನ್ ಆಗಿ ದ್ವಿತೀಯ ಪಿಯುಸಿ ಯ ಪುರುಷೋತ್ತಮ್, ಮತ್ತು ಬಾಲಕಿಯರ ವೈಯಕ್ತಿಕ ಚಾಂಪಿಯನ್ ಆಗಿ ದ್ವಿತೀಯ ಪಿಯುಸಿ ಯ ಸ್ವಾತಿ ಗಳಿಸಿದ್ದು, ಬಾಲಕರ, ಮತ್ತು ಬಾಲಕಿಯರ ಸಮಗ್ರ ಪ್ರಶಸ್ತಿ, ಸೇರಿ ಬಾಲಕ-ಬಾಲಕಿಯರ ಒಟ್ಟು ಸಮಗ್ರ ಪ್ರಶಸ್ತಿ ಪಡೆದಿದ್ದು ಎಲ್ಲರನ್ನೂ ಇದೇ ವೇಳೆ ಅಭಿನಂದಿಸಲಾಯಿತು.

ಕಾಲೇಜು ಆಡಳಿತ ಮಂಡಳಿಯ ಕಾರ್ಯದರ್ಶಿ ಶರತ್ ಕೆಂಬಾಳು ಗೌರವಾಧ್ಯಕ್ಷ ಡಾ.ಶೇಷಶಯನ, ನಿರ್ದೇಶಕರುಗಳಾದ ಓ.ಆರ್. ರಂಗೇಗೌಡ, ಗೋವಿಂದ್‌ರಾಜ್, ಕೆ.ಎಲ್.ಶಿವಕುಮಾರ್, ರಾಘವೇಂದ್ರ ಹಾಗೂ ಕಾಲೇಜಿನ ಪ್ರಾಂಶುಪಾಲರು ಮತ್ತು ಸಿಬ್ಬಂದಿ ವರ್ಗ ಇದ್ದರು.

## ರಾಜಾಜಿನಗರದಲ್ಲಿ ಮದ್ಯದಂಗಡಿ ಬೇಡ: ನಿವಾಸಿಗಳ ಪ್ರತಿಭಟನೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ನಗರದ ಚಿಕ್ಕಕೊಂಡಗೊಳ ಗ್ರಾಮಕ್ಕೆ ಹೊಂದಿಕೊಂಡಿರುವ ರಾಜಾಜಿನಗರ ವೃತ್ತದಲ್ಲಿ ಮದ್ಯದಂಗಡಿ ತೆರೆಯಲು ಅನುಮತಿ ನೀಡಬಾರದೆಂದು ನಿವಾಸಿಗಳು ಅಹೋರಾತ್ರಿ ಪ್ರತಿಭಟನೆ ನಡೆಸಿದರು.

ಬಡಾವಣೆಯಲ್ಲಿ ಈಗಾಗಲೇ ನೂರಾರು ಮನೆಗಳು ನಿರ್ಮಾಣವಾಗಿದ್ದು ಅನೇಕ ಕಟ್ಟಡ ಕಾಮಗಾರಿಗಳು ನಡೆಯುತ್ತಿವೆ. ಬಡಾವಣೆಗೆ ಹೊಂದಿಕೊಂಡಿರುವ ವೃತ್ತದಿಂದ ದೊಡ್ಡಕೊಂಡಗೊಳ, ಯಡಿಯೂರು, ದಾಸರಕೊಪ್ಪಲು, ಹರಳಹಳ್ಳಿ ಹಾಗೂ ಹಾಸನ ನಗರಕ್ಕೆ ಸಂಪರ್ಕಿಸುವ ಮುಖ್ಯ ರಸ್ತೆಯಿದೆ. ಇಲ್ಲಿ ನಿತ್ಯ ಸಾವಿರಾರು ವಾಹನಗಳು ಓಡಾಡುತ್ತವೆ. ಶಾಲಾ ಕಾಲೇಜು ಮಕ್ಕಳು ನಿತ್ಯ ಸಂಚರಿಸುವ ಮಾರ್ಗ ಇದಾಗಿದೆ. ಇಲ್ಲಿ ಮದ್ಯದಂಗಡಿಗೆ ಅನುಮತಿ ನೀಡಿದರೆ ಶಾಂತಿಗೆ ಭಂಗವಾಗುತ್ತದೆಂದು ಮಹಿಳೆಯರು ದೂರಿದರು.

ಜನವಸತಿ ಪ್ರದೇಶದಲ್ಲಿ ಮದ್ಯದಂಗಡಿ ತೆರೆಯಬಾರದೆಂದು ನ್ಯಾಯಾಲಯದ ಆದೇಶವಿದೆ. ಆದರೂ ಅಬಕಾರಿ ಇಲಾಖೆ ಅಧಿಕಾರಿಗಳು ಪ್ರಭಾವಿಗಳ ಒತ್ತಡಕ್ಕೆ ಮಣಿದು ಅವಕಾಶ ಕಲ್ಪಿಸಿದ್ದಾರೆ. ಬಾರ್ ಅನ್ನು ಬೇರೆಡೆಗೆ ಸ್ಥಳಾಂತರ ಮಾಡಬೇಕು. ಕಟ್ಟಡ ಮಾಲೀಕರು ಹಾಗೂ ಬಾರ್ ನಡೆಸಲು ಪರವಾನಗಿ ನೀಡಿರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು.

ರಾಜಾಜಿನಗರ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಬಸವನಾಯಕ್, ಲಿಂಗರಾಜು, ಪುಟ್ಟನಾಯಕ, ಬೀರೇಗೌಡ, ಜಯಕುಮಾರ್ ಮತ್ತಿತರರಿದ್ದರು.

## 5.40 ಲಕ್ಷ ರೂ. ಲಾಭದಲ್ಲಿ ಕಲ್ಕೆರೆ ಪ್ರಾಥಮಿಕ ಸಹಕಾರ ಸಂಘ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಚನ್ನರಾಯಪಟ್ಟಣ: ಎಲ್ಲಾ ಷೇರುದಾರ ರೈತರ ಹಾಗೂ ಸದಸ್ಯರ ಸಹಕಾರದಿಂದ ಕಲ್ಕೆರೆ ಕೃಷಿ ಪತ್ತಿನ ಸಹಕಾರ ಸಂಘವು 2024-2025ನೇ ಸಾಲಿನಲ್ಲಿ 5.40 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ.ಎನ್.ಅಶೋಕ್ ತಿಳಿಸಿದರು.



ತಾಲ್ಲೂಕಿನ ನುಗ್ಗೇಹಳ್ಳಿ ಹೋಬಳಿ ಕಲ್ಕೆರೆ ಕೃಷಿ ಪತ್ತಿನ ಸಹಕಾರ ಸಂಘದಿಂದ ಹಮ್ಮಿಕೊಂಡಿದ್ದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರಸ್ತುತ ಕೃಷಿ ಪತ್ತಿನಲ್ಲಿ 1750 ಷೇರುದಾರ ರೈತರಿದ್ದು, ಈಗಾಗಲೇ 8.24 ಕೋಟಿ ರೂ. ಕೃಷಿ ಸಾಲ ನೀಡಲಾಗಿದೆ. ಜೊತೆಗೆ ಸ್ತ್ರೀಶಕ್ತಿ ಸಂಘಗಳಿಗೆ 26 ಲಕ್ಷ ರೂ. ಹೈನುಗಾರಿಕೆ ಸಾಲ 1.30 ಲಕ್ಷ ರೂ. ನೀಡಲಾಗಿದೆ. ಮುಂಬರುವ ದಿನಗಳಲ್ಲಿ ಕ್ಷೇತ್ರದ ಶಾಸಕ ಸಿ.ಎನ್. ಬಾಲಕೃಷ್ಣ ಅವರ ಸಹಕಾರದಿಂದ ಹೊಸ ರೈತರಿಗೆ ಸಾಲ ನೀಡಲು ಹೆಚ್ಚು ಕಾಳಜಿ ವಹಿಸುವುದಾಗಿ ತಿಳಿಸಿದರು.

ಕೃಷಿ ಪತ್ತಿನ ನಿರ್ದೇಶಕಿ ಸುಧಾ ಹರೀಶ್ ಮಾತನಾಡಿ, ಸಂಘದ ಷೇರುದಾರ ರೈತರ ಸಲಹೆ ಸೂಚನೆಗಳನ್ನು ಸಭೆಯ ಮೂಲಕ ಪಡೆಯಲಾಗಿದ್ದು, ಮುಂಬರುವ ದಿನಗಳಲ್ಲಿ ಪಾರದರ್ಶಕವಾಗಿ ಸಂಘ ಕಾರ್ಯನಿರ್ವಹಿಸಲು ಎಲ್ಲಾ ಸದಸ್ಯರು ಕೈಜೋಡಿಸುವ ಜೊತೆಗೆ ಪ್ರತಿ ತಿಂಗಳು ನಡೆಯುವ ಮಾಸಿಕ ಸಭೆಯ ಗೌರವ ಧನವನ್ನು ನಿರ್ದೇಶಕರು ಪಡೆಯದಿರಲು ತೀರ್ಮಾನಿಸಿದ್ದು ಆ ಹಣವನ್ನು ಈ ವ್ಯಾಪ್ತಿಯ ಮಕ್ಕಳ ಶಿಕ್ಷಣಕ್ಕೆ ವ್ಯಯ ಮಾಡುವಂತೆ ಸಲಹೆ ನೀಡಿದರು.

ಷೇರುದಾರ ರೈತರು ಹೊಸ ಸಾಲ ನೀಡಲು ಸಮಸ್ಯೆಯಾಗುತ್ತಿರುವ ಕುರಿತು ಹಾಗೂ ಖರ್ಚು ವೆಚ್ಚದ ಪ್ರತಿಯನ್ನು ಎಲ್ಲಾ ಸದಸ್ಯರಿಗೂ ನೀಡುವಂತೆ ಮತ್ತು ಸಂಘದಲ್ಲಿ ಉಳಿತಾಯಕ್ಕೆ ಹೆಚ್ಚಿನ ಆದ್ಯತೆ ನೀಡುವಂತೆ ಸಲಹೆ ನೀಡಿದರು.

## ಸ್ನೇಹಿತೆಯರ ಜೊತೆಗಿನ ವಿಡಿಯೋ ವೈರಲ್: ಯುವಕ ಆತ್ಮಹತ್ಯೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ನಗರದ ಮಹಾರಾಜ ಪಾರ್ಕ್‌ನಲ್ಲಿ ಕಾಲೇಜು ಸ್ನೇಹಿತೆಯರೊಂದಿಗೆ ಕುಳಿತಿದ್ದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದರಿಂದ ಮನನೊಂದ ವಿದ್ಯಾರ್ಥಿಯೊಬ್ಬ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ತಾಲ್ಲೂಕಿನ ಕಲ್ಲೇನಹಳ್ಳಿಯಲ್ಲಿ ನಡೆದಿದೆ.



ತಾಲ್ಲೂಕಿನ ಮೊಸಳೆಹೊಸಳ್ಳಿ ಸರ್ಕಾರಿ ಪದವಿ ಕಾಲೇಜಿನಲ್ಲಿ ಬಿಎ ಅಂತಿಮ ವರ್ಷದಲ್ಲಿ ಓದುತ್ತಿದ್ದ ಕೆ. ಪವನ್ (21) ಮೃತ ದುರ್ದೈವಿ. ಬುಧವಾರ ಹಾಸನಕ್ಕೆ ಬಂದಿದ್ದ ಪವನ್ ತನ್ನ ಇಬ್ಬರು ಸ್ನೇಹಿತೆಯರೊಂದಿಗೆ ಪಾರ್ಕ್‌ನ ಆಸನದ ಮೇಲೆ ಕುಳಿತಿದ್ದ. ಮೂವರು ಹುಡುಗಾಟ ಮಾಡುತ್ತಾ ಕುಳಿತಿದ್ದ ದೃಶ್ಯವನ್ನು ದೂರದಿಂದ ಮಹಿಳೆಯೊಬ್ಬರು ಮೊಬೈಲ್ ಕ್ಯಾಮರಾದಲ್ಲಿ ಸೆರೆ ಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದರು.

ಸಾರ್ವಜನಿಕ ಸ್ಥಳಗಳಲ್ಲಿ ಹೀಗೆ ಕರ್ಮಕಾಂಡ ಮಾಡಿಕೊಂಡು ಕುಳಿತಿದ್ದಾರೆ. ಸಣ್ಣ ಮಕ್ಕಳು ಓಡಾಡುವ ಜಾಗದಲ್ಲಿ ಹೇಗಿರಬೇಕೆಂಬ ಪರಿಜ್ಞಾನ ಇಲ್ಲವೇ. ಇಂತವರಿಗೆ ಏನು ಮಾಡಬೇಕು. ನಮ್ಮ ಸಮಾಜ ಯಾವ ಸ್ಥಿತಿ ತಲುಪಿದೆ ನೋಡಿ. ಇಂತವರಿಗೆ ಏನು ಮಾಡಬೇಕೆಂದು ಮಹಿಳೆ ರೀಲ್ಸ್ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದರು.

ಈ ವಿಡಿಯೋ ಪವನ್‌ನ ಸ್ನೇಹಿತರಿಗೂ ಸಿಕ್ಕಿತ್ತು. ಅದರಿಂದ ಮನನೊಂದ ಆತ ಎಲ್ಲರಿಗೂ ಕರೆ ಮಾಡಿ ಡಿಲೀಟ್ ಮಾಡುವಂತೆ ಗೋಗರೆದಿದ್ದ. ಪರಿಸ್ಥಿತಿ ವಿಕೋಪಕ್ಕೆ ತಿರುಗಿದ್ದರಿಂದ ಮನನೊಂದು ತಮ್ಮ ಮನೆಯ ಕೊಟ್ಟಿಗೆಯಲ್ಲಿ ನೇಣು ಬಿಗಿದುಕೊಂಡಿದ್ದಾನೆ.

ಬಡ ಕುಟುಂಬದ ಪವನ್ ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡಿದ್ದಾನೆ. ತಾಯಿ ಮನೆಗೆಲಸ ಮಾಡಿಕೊಂಡು ಆತನನ್ನು ಬೆಳೆಸಿದ್ದರು ಎನ್ನಲಾಗಿದೆ. ಗೊರೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಬೆಂಗಳೂರು-ಮಂಗಳೂರು ರೈಲು ಸಂಚಾರ ಮತ್ತಷ್ಟು ವಿಳಂಬ



ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ಬೆಂಗಳೂರು-ಮಂಗಳೂರು ನಡುವೆ ಹಗಲು ವೇಳೆ ರೈಲು ಸಂಚಾರ ನ. 1 ರಿಂದ ಆರಂಭವಾಗುತ್ತದೆ ಎನ್ನಲಾಗಿತ್ತಾದರೂ ಮತ್ತಷ್ಟು ವಿಳಂಬವಾಗುವ ಸಾಧ್ಯತೆಯಿದೆ.

ಸಕಲೇಶಪುರ-ಸುಬ್ರಹ್ಮಣ್ಯ ರಸ್ತೆ ಘಾಟ್ ಮಾರ್ಗದಲ್ಲಿ ಕೈಗೊಂಡಿರುವ ರೈಲ್ವೆ ವಿದ್ಯುದೀಕರಣ (ಆರ್‌ಇ) ಕಾಮಗಾರಿ ವಿಳಂಬವಾಗಿರುವುದರಿಂದ ನಿಗದಿತ ಅವಧಿಯೊಳಗೆ ರೈಲುಗಳ ಪುನರಾರಂಭವಾಗುವ ಸಾಧ್ಯತೆ ಕಡಿಮೆ ಎನ್ನಲಾಗಿದೆ.

2025ರ ಮೇ 15 ರಂದು ನೈರುತ್ಯ ರೈಲ್ವೆಯು ಈ ಕಾಮಗಾರಿಗಾಗಿ ಜೂನ್ 1ರಿಂದ ನವೆಂಬರ್ 1ರವರೆಗೆ 154 ದಿನಗಳ ಕಾಲ ಬೆಂಗಳೂರು-ಮಂಗಳೂರು ಮತ್ತು ಬೆಂಗಳೂರು-ಕಾರವಾರ ಮಾರ್ಗಗಳಲ್ಲಿ ಹಗಲು ರೈಲು ಸಂಚಾರವನ್ನು ರದ್ದುಗೊಳಿಸಿತ್ತು.

ಈ ನಿರ್ಧಾರವು ಸಕಲೇಶಪುರ-ಸುಬ್ರಹ್ಮಣ್ಯ ಮಾರ್ಗದಲ್ಲಿ ಸುರಕ್ಷತಾ ಸಂಬಂಧಿತ ಕೆಲಸಗಳು ಮತ್ತು ವಿದ್ಯುದೀಕರಣ ಕಾಮಗಾರಿಗಾಗಿ ನಡೆಸುವ 4 ಗಂಟೆಗಳ ಲೈನ್ ಬ್ಲಾಕ್‌ಗೆ ಸಂಬಂಧಿಸಿದ್ದು, ಇದು ಹಗಲು ಸಮಯದಲ್ಲಿ ನಡೆಯುವ ರೈಲುಗಳ ಸಂಚಾರಕ್ಕೆ ಅಡ್ಡಿಯಾಗಿದೆ. ಕಾಮಗಾರಿ ಪ್ರಗತಿ ನಿರೀಕ್ಷಿತ ಮಟ್ಟದ ಸಾಗದೆ ಇರುವುದರಿಂದ ಈಗ ರೈಲ್ವೆ ಸಚಿವಾಲಯದಿಂದ ಬ್ಲಾಕ್ ಅವಧಿಯನ್ನು ವಿಸ್ತರಿಸುವ ಅನುಮತಿ ಕೋರಲಾಗಿದೆ.

## ಸರ್ಕಾರದ ಪ್ರಧಾನ ಯೋಜನೆಗಳ ಕುರಿತು ಕಾರ್ಯಾಗಾರ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ : ವಿದ್ಯಾರ್ಥಿಗಳು ಮತ್ತು ಯುವಕರಿಗೆ ಅನೇಕ ಯೋಜನೆಗಳು ಲಭ್ಯವಿದ್ದು, ಅವುಗಳ ಕುರಿತು ಮಾಹಿತಿಯನ್ನು ಪಡೆದುಕೊಳ್ಳಲು ಸರ್ಕಾರದ ವೆಬ್‌ಸೈಟ್‌ಗಳನ್ನು ನಿಯಮಿತವಾಗಿ ಭೇಟಿ ನೀಡಿ ಎಂದು ಜಿಲ್ಲಾ ಯುವ ಅಧಿಕಾರಿಗಳಾದ ಅಭಿಷೇಕ್ ಚವರೆ ಅವರು ತಿಳಿಸಿದ್ದಾರೆ.




ಭಾರತ ಸರ್ಕಾರದ ಮೇರಾ ಯುವ ಭಾರತ್, ಹಾಸನ, ಸರ್ಕಾರಿ ಗೃಹ ವಿಜ್ಞಾನ ಕಾಲೇಜು, ಹಾಸನ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ? ಹೊಯ್ಸಳ ರೋವರ್ಸ್, ಶಾಂತಲಾ ರೇಂಜರ್ಸ್ ಘಟಕ, ಮಧುಶ್ರೀ ಮಹಿಳಾ ಸಮಾಜ ಹಾಗೂ ಸಂಧ್ಯಾರಾಣಿ ಮಹಿಳಾ ಸಮಾಜ, ಹಾಸನ ಇವರ ಸಂಯುಕ್ತಾಶ್ರಯದಲ್ಲಿ ಸರ್ಕಾರಿ ಗೃಹ ವಿಜ್ಞಾನ ಕಾಲೇಜಿನ ಸಭಾಂಗಣದಲ್ಲಿಂದು ಆಯೋಜಿಸಲಾಗಿದ್ದ ಸರ್ಕಾರದ ಪ್ರಧಾನ ಯೋಜನೆಗಳ ಕುರಿತ ಕಾರ್ಯಾಗಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಸರ್ಕಾರದ ವೆಬ್‌ಸೈಟ್‌ಗಳನ್ನು ನಿಯಮಿತವಾಗಿ ಭೇಟಿ ನೀಡುವುದರ ಜೊತೆಗೆ ಅದರ ನವೀಕರಣಗಳನ್ನು ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು.



ಬೆಂಗಳೂರಿನ ವಾರ್ತಾಸೌಧದಲ್ಲಿಂದು 2024ನೇ ಸಾಲಿನ ವಡ್ಡರ್ಸೆ ರಘುರಾಮ ಶೆಟ್ಟಿ ಸಾಮಾಜಿಕ ನ್ಯಾಯ ಪತ್ರಿಕೋದ್ಯಮ ಪ್ರಶಸ್ತಿಯನ್ನು ಹಿರಿಯ ಪತ್ರಕರ್ತರಾದ ಡಿ. ಉಮಾಪತಿ, 2017 ರಿಂದ 2023ನೇ ವರ್ಷದ ಪರಿಸರ ಮತ್ತು ಅಭಿವೃದ್ಧಿ ಪತ್ರಿಕೋದ್ಯಮ ಪ್ರಶಸ್ತಿಗಳನ್ನು ಹಿಂದೂ ಪತ್ರಿಕೆಯ ಹಿರಿಯ ಪ್ರತಿನಿಧಿ ಸತೀಶ್ ಜಿ.ಟಿ., ವಿಜಯ ಕರ್ನಾಟಕದ ಚೀ.ಜ.ರಾಜೀವ, ಕನ್ನಡಪ್ರಭ ಪತ್ರಿಕೆಯ ವಿನೋದ್ ಕುಮಾರ್ ನಾಯ್ಕ, ಪ್ರಜಾವಾಣಿಯ ಮಂಜುನಾಥ್, ಯೋಗೇಶ್ ಮಾರೇನಹಳ್ಳಿ ಮೊದಲಾದವರಿಗೆ ಸಿಎಂ ಸಿದ್ದರಾಮಯ್ಯ ಇಂದು ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಿದರು. ಸಚಿವ ಬೈರತಿ ಸುರೇಶ್, ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್, ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ವಾರ್ತಾ ಇಲಾಖೆ ಆಯುಕ್ತರಾದ ಹೇಮಂತ್ ನಿಂಬಾಳ್ಕರ್ ಮೊದಲಾದವರಿದ್ದರು.

## ಗಾಂಜಾ ಗಿಡ ಬೆಳೆದಿದ್ದವನ ಬಂಧನ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಬೇಲೂರು: ಜಮೀನು ಮಾಲೀಕರಿಗೆ ಗೊತ್ತಾಗದಂತೆ ಗಾಂಜಾ ಗಿಡ ಬೆಳೆದಿದ್ದ ಆರೋಪಿಯನ್ನು ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹಳೇಬೀಡು ಹೋಬಳಿ ಕಲ್ಲುಶೆಟ್ಟಿಹಳ್ಳಿ ಗ್ರಾಮದ ವೆಂಕಟೇಶ ಬಂಧಿತ ಆರೋಪಿ. ದೊಡ್ಡಬ್ಯಾಡಿಗೆರೆಯ ಮಲ್ಲಿಕಾರ್ಜುನ ಎಂಬುವವರಿಗೆ ಸೇರಿದ ಶುಂಠಿ ಹೊಲದಲ್ಲಿ ವೆಂಕಟೇಶ್ ಯಾರ ಗಮನಕ್ಕೂ ಬಾರದಂತೆ ಗಾಂಜಾ ಗಿಡ ಬೆಳೆದಿದ್ದ. ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದಾಗ ಆರೋಪಿ ಸಿಕ್ಕಿಬಿದ್ದಿದ್ದಾನೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಇತಿಹಾಸದಲ್ಲಿ ಈ ದಿನ

### ಸೆಪ್ಟೆಂಬರ್-20

1519: ಫರ್ಡಿನಾಂಡ್ ಮ್ಯಾಗೆಲ್ಲನ್ ತನ್ನ ವಿಶ್ವಪ್ರದಕ್ಷಿಣಾ ಸಮುದ್ರಯಾನವನ್ನು ಆರಂಭಿಸಿದ ದಿನ.

1854: ಕ್ರಿಮಿಯನ್ ಯುದ್ಧದ ಸಂದರ್ಭದಲ್ಲಿ ಅಲ್ಮಾ ಸಮರ ನಡೆದಿತ್ತು.

1970: ಸಿರಿಯಾದಲ್ಲಿ ಹಫಝ್ ಅಲ್-ಅಸಾದ್ ಅಧಿಕಾರಕ್ಕೆ ಬಂದರು.

2011: ಅಮೆರಿಕದ **DON'T ASK, DON'T TELL** ಸೇನಾ ನೀತಿ ಅಧಿಕೃತವಾಗಿ ರದ್ದಾಯಿತು.

#### ಜನನ

1878: ಬ್ರಹ್ಮ ಸಮಾಜದ ನಾಯಕಿ ಪಂಡಿತಾ ರಾಮಾಬಾಯಿ

1946: ಎಸ್.ಪಿ. ಬಾಲಸುಬ್ರಹ್ಮಣ್ಯಂ (ಭಾರತೀಯ ಪ್ಲೇಬ್ಯಾಕ್ ಗಾಯಕ, ಸಂಗೀತ ನಿರ್ದೇಶಕ)

1881: ಚೆಸ್ಟರ್ ಅರ್ಥರ್, ಅಮೆರಿಕಾದ 21ನೇ ಅಧ್ಯಕ್ಷ

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248